**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್, ಸಿ ನ್ಯಾಯಾಲಯ, ನವಲಗುಂದ.**

**ಸಿ.ಸಿ ನಂ. 489/2019**

**ಫಿರ್ಯಾದಿದಾರರುಃ ಅಣ್ಣಿಗೇರಿ ಪಿ. ಎಸ್.**

**ವಿರುದ್ದ**

**ಆರೋಪಿತಃ ಎ 2. ವಿಶಾಲಾ ಮಂಜುನಾಥ ಬೀರನಾಯ್ಕರ.**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿತನ ಹೇಳಿಕೆ**

**ಪ್ರಶ್ನೆ 1 : ನ್ಯಾಯಾಲಯದಲ್ಲಿ ಆದ ಸಾಕ್ಷಿದಾರರ ಸಾಕ್ಷ್ಯ ತಿಳಿದುಕೊಂಡಿದ್ದೀರಾ?**
**ಉತ್ತರಃ ಕೇಳಿದ್ದೇನೆ.**

**ಪ್ರಶ್ನೆ 2 : ಪ್ರಾ.ಸಾ-1/ಚಾ.ಸಾ-1 ಚನ್ನವೀರಪ್ಪ ಹನುಮಂತ ಇಸ್ಲಾಂಪೂರ** ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ದಿಃ 25-06-2015 ರಂದು ಮದ್ಯಾನ 03.00 ಗಂಟೆಯಲ್ಲಿ ನವಲಗುಂದ ಹೊಲದ ದಾರಿಯಲ್ಲಿ ಆರೋಪಿತರು ಬಾರ ಕೋಲು ಮತ್ತು ಕಟ್ಟಿಗೆಯಿಂದ ನನ್ನ ಮೇಲೆ ಹಲ್ಲೆ ಮಾಡಿದರು ಮತ್ತು ಅವಾಚ್ಯ ಶಬ್ದಗಳಿಂದ ಬೈದರು ಮತ್ತು ಅಷ್ಟಕ್ಕೆ ಬಿಟ್ಟಿದ್ದೇವೆ ಎಂದು ಹೇಳಿ ಹೋದರು. ಅಲ್ಲಿದ್ದ ವೀರಪ್ಪ ಎನ್ನುವವರು ಜಗಳ ಬಿಡಿಸಿದರು.ನಂತರ ನಾನು ಪೋಲಿಸರಿಗೆ ಹೋಗಿ ದೂರು ನೀಡಿದೆನು ಎಂದು ತಮ್ಮ ಸಾಕ್ಷ್ಯದಲ್ಲಿ ಹೇಳಿರುತ್ತಾರೆ ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ ಸುಳ್ಳು.**

**ಪ್ರಶ್ನೆ 3 : ಪ್ರಾ.ಸಾ-5/ಚಾ.ಸಾ-5 ಮಲ್ಲಪ್ಪ ಚಿನ್ನಪ್ಪ ನವಲಗುಂದ** ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ದಿಃ 25.06.2015 ರಂದು ಮಧ್ಯಾಹ್ನ 3.00 ಗಂಟೆಯ ಸುಮಾರಿಗೆ ಹೊಲಕ್ಕೆ ಹೋಗಲು ಇಬ್ರಾಹಿಂಪೂರ ರಸ್ತೆಯಲ್ಲಿ ಹೋಗುತ್ತಿದ್ದಾಗ ಚೆನ್ನವಿರಪ್ಪನವರ ಬೈಕನ್ನು ಶೀವಲೀಲಾ ಎನ್ನುವವರು ಅಡ್ಡಗಟ್ಟಿ ನಿಲ್ಲಿಸಿದರು. ಆಗ ವಿಶಾಲರವರು ಆತನ ಅಂಗಿ ಹಿಡಿದು ಬೈದಾಡಿದರು. ನಂತರ ಮಹಾದೇವಿಯವರು ಆಕೆಯ ತಂದೆಯವರನ್ನು ಕರೆತಂದರು. ಆಗ ಅಲ್ಲಿ ಮಂಜುನಾಥ ಬಂದು ನಿಂದು ಬಾಳ ಆಗೈತಿ ಎಂದು ಬಾರಕೋಲನಿಂದ ಚೆನ್ನವಿರಪ್ಪನಿಗೆ

ಸಿಕ್ಕ ಸಿಕ್ಕಲ್ಲಿ ಹೊಡೆದರು. ಅಲ್ಲಿಗೆ ನಾನು ಮತ್ತು 4 ಜನರು ಸೇರಿ ಗಲಾಟೆ ಬಿಡಿಸಿದರು ಎಂದು ತಮ್ಮ ಸಾಕ್ಷ್ಯದಲ್ಲಿ ಹೇಳಿರುತ್ತಾರೆ ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ ಸುಳ್ಳು.**

**ಪ್ರಶ್ನೆ 4 : ಪ್ರಾ.ಸಾ-7/ಚಾ.ಸಾ-8 ಮಹಾಂತೇಶ ಫಕ್ಕೀರಪ್ಪ ಅಮಾತ್ತೆನವರ** ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ 2015 ರಲ್ಲಿ ಮಧ್ಯಾಹ್ನ ಸಮಯದಲ್ಲಿ ಕಿತ್ತೂರಿನ ಹೊಲದ ದಾರಿಯಲ್ಲಿ ಚೆನ್ನವೀರಪ್ಪನವರಿಗೆ ಆರೋಪಿತರು ಹಲ್ಲೆ ಮಾಡಿದರು ಮತ್ತು ಆ ಪೈಕಿ ಆರೋಪಿ ಮಂಜುನಾಥ ಬಾರಕೋಲಿನಿಂದ ಚೆನ್ನವೀರಪ್ಪನವರ ಮೇಲೆ ಹಲ್ಲೆ ಮಾಡಿದರು ಎಂದು ತಮ್ಮ ಸಾಕ್ಷ್ಯದಲ್ಲಿ ಹೇಳಿರುತ್ತಾರೆ ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ ಸುಳ್ಳು.**

**ಪ್ರಶ್ನೆ 5 : ಪ್ರಾ.ಸಾ-8/ಚಾ.ಸಾ-9 ಡಾಃ ಅಶೋಕ ಅಗರವಾಲ** ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ಕಳೆದ 9 ವರ್ಷಗಳಿಂದ ಅಣ್ಣಿಗೇರಿ ಸರ್ಕಾರಿ ಆಸ್ಪತ್ರೆಯಲ್ಲಿ ಸಪ್ಟೆಂಬರ್ 2021 ರವರೆಗೆ ಆಡಳಿತ ವೈದ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ದಿನಾಂಕ 26.06.2015 ಬೆಳಿಗ್ಗೆ 09.00 ಚೆನ್ನವೀರಪ್ಪ ಇಸ್ಲಾಂಪೂರ ಹೊಡೆದಾಟದ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದು ಪರಿಕ್ಷೀಸಲಾಗಿ ಕೆಳಕಂಡ ಗಾಯಗಳು ಕಂಡು ಬಂದವು.

1. A cut injury of size 2X2 C.M. on right side for forehead
2. A cut injury of size 2X1X1 C.M. on right side of chik on maxillary region

ಮೇಲೆ ಹೆಳಿದ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿದ್ದು, ಆ ಬಗ್ಗೆ ನಾನು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ಮೇಲೆ ಹೇಳಿದ ಗಾಯಗಳು ನಾನು ಚಿಕಿತ್ಸೆ ನೀಡುವ 2 ಗಂಟೆ ಮೊದಲು ಆಗಿರಬಹುದು ಎಂದು ತಮ್ಮ ಸಾಕ್ಷ್ಯದಲ್ಲಿ ಹೇಳಿರುತ್ತಾರೆ ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ ಸುಳ್ಳು.**

**ಪ್ರಶ್ನೆ 6 : ಪ್ರಾ.ಸಾ-9/ಚಾ.ಸಾ-10 ರವಿಕುಮಾರ ಶಿವಲಿಂಗಪ್ಪ ಕಪ್ಪತ್ತನ್ನವರ** ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ನಾನು ಮೇ 2015 ರಿಂದ ಓಪ್ರೀಲ್ 2016 ರ ರವರೆಗೆ ಅಣ್ಣಿಗೇರಿ ಪೋಲೀಸ ಠಾಣೆಯಲ್ಲಿ ಪಿ ಎಸ್ ಐ ಆಗಿ ಕಾರ್ಯನಿರ್ವಹಿಸಿರುತ್ತೇನೆ. ದಿಃ 26.06.2015 ರಂದು ಚಾಸಾ-1 ರವರು ನೀಡಿದ ದೂರನ್ನು ಪಡೆದು ಅದನ್ನು ಠಾಣಾ

ಗುನ್ನಾ ನಂಃ 77/2015 ರಲ್ಲಿ ದಾಖಲಿಸಿಕೊಂಡು, ಎಫ್ ಐ ಆರ್ ನ್ನು ನಾಯಾಲಯಕ್ಕೆ ನಿವೇದಿಸಿಕೊಂಡೇನು. ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಜರುಗಿಸಿ 1 ಬಾರಕೋಲನ್ನು ಪಂಚರ ಸಮಕ್ಷಮ ಜಪ್ತು ಪಡಿಸಿಕೊಂಡೇನು. ಅದಕ್ಕೆ ಪಿ ಎಫ್ ನಾಯಾಲಯಕ್ಕೆ ನಿವೇದಿಸಿಕೊಂಡೇನು. ಅದೇ ದಿನ ಚಾಸಾ-4 ರಿಂದ 8 ರವರ ಹೇಳಿಕೆಗಳನ್ನು ಪಡೆದುಕೊಂಡೇನು. 10.07.2015 ರಂದು ಚಾಸಾ-9 ರವರಿಂದ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡೇನು. ತನಿಖೆ ಪೂರೈಸಿ ಆರೋಪಿತರ ವಿರುದ್ಧ ಆರೋಪ ಪಟ್ಟಿಯನ್ನು ಸಲ್ಲಿಸಿದೇನು ಎಂದು ತಮ್ಮ ಸಾಕ್ಷ್ಯದಲ್ಲಿ ಹೇಳಿರುತ್ತಾರೆ ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ ಸುಳ್ಳು.**

**ಪ್ರಶ್ನೆ 7 : ನಿಮಗೆ ಮತ್ತೇನಾದರೂ ಹೇಳುವುದು ಇದೆಯಾ?**

**ಉತ್ತರಃ ಇಲ್ಲ.**

**ಪ್ರಶ್ನೆ 8 : ನಿಮ್ಮ ಪರವಾಗಿ ಸಾಕ್ಷಿ ಮಾಡಿಸುತ್ತೀರಾ?**

**ಉತ್ತರಃ ಇಲ್ಲ.**

**(ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಆತನು ಕೊಟ್ಟ ಉತ್ತರವನ್ನು ಯತಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು)**

ಸಹಿ/-

**ದಿನಾಂಕಃ18-06-2026 ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ಸ್ಥಳ ಃನವಲಗುಂದ. ನವಲಗುಂದ.**